

# ಬಹುಮಾನ

**● ವೇದಾವತಿ ಎಚ್.ಎಸ್.**

ಕಲೆ: ಗಣೇಶ ಆಚಾರ್ಯ

ಬಹಳ ವರ್ಷಗಳ ಹಿಂದೆ ಒಂದೂರಿನಲ್ಲಿ ಒಬ್ಬ ರಾಜನಿದ್ದ. ಅವನಿಗೆ ಒಬ್ಬಳೇ ಮಗಳಿದ್ದಳು. ರಾಜ ಮಗಳಿಗೆ ಯೋಗ್ಯ ವರನನ್ನು ಹುಡುಕುತ್ತಿದ್ದ. ಅದಕ್ಕಾಗಿ ಸ್ವಯಂವರ ಏರ್ಪಾಡಿಸಿದ. ಸ್ವಯಂವರಕ್ಕೆ ಕಳಿಂಗ, ಕುಂತಳ ಹಾಗೂ ಆವಂತಿಯ ರಾಜಕುಮಾರರು ಬಂದರು.

ರಾಜನು ಮೂವರು ರಾಜಕುಮಾರರಿಗೂ ಒಂದು ತಿಂಗಳ ಕಾಲ ಪ್ರವಾಸ ಹೋಗಿ ರಾಜಕುಮಾರಿಗೆ ಒಂದು ಉತ್ತಮವಾದ ಬಹುಮಾನವನ್ನು ತರಬೇಕೆಂದು ಹೇಳಿದ. ಮೂವರು ರಾಜಕುಮಾರರು ರಾಜನ ಆಜ್ಞೆಯಂತೆ ಅರಮನೆಯಿಂದ ಪ್ರವಾಸ ಹೊರಟರು. ತಿಂಗಳಾಯಿತು, ಮೂವರು ರಾಜಕುಮಾರರು ಪ್ರವಾಸ ಮುಗಿಸಿ ಅರಮನೆಗೆ ವಾಪಸ್ಸಾದರು.